# IN THE COURT OF THE ADDL. SENIOR CIVIL JUDGE & JMFC., GUBBI

# **OS - 176/2022**

Witness present and duly sworn on : 10.03.2026.

Further cross Examination: by Counsel for Defendant No.6 :

1946 ರಲ್ಲಿ ಲಿಂಗೇಗೌಡ ರವರಿಗೆ ಮಂಜೂರು ಆಗಿರುತ್ತದೆ. ಸದರಿ ಮಂಜೂರು ಆಗಿರುವ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಅಂತಹ ಮಂಜೂರು ದಾಖಲೆಯನ್ನು ಹಾಜರುಪಡಿಸದೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1958 ರಲ್ಲಿ ಲಿಂಗೇಗೌಡ ರವರಿಗೆ ಸರ್ವೆ ನಂ.84/1 ರಲ್ಲಿ 5 ಎಕರೆ 6 ಗುಂಟೆ ಬಂದಿತ್ತು ಎಂದರೆ ಸರಿಯಲ್ಲ. 1958 ರಲ್ಲಿ ಲಿಂಗೇಗೌಡ ರವರಿಗೆ 5 ಎಕರೆ 37 ಗುಂಟೆ ಬಂದಿರುತ್ತದೆ. ಸರ್ವೆ ನಂ.77/1 ರಲ್ಲಿ 1 ಎಕರೆ 6 ಗುಂಟೆ ಲಿಂಗೇಗೌಡರವರಿಗೆ ಬಂದಿತ್ತು ಎಂದರೆ ಇರಬಹುದು. ದಿನಾಂಕಃ 10.04.1975 ರಂದು ಸರ್ವೆ ನಂ.84/1 ರಲ್ಲಿ 2 ಎಕರೆ ಜಮೀನನ್ನು ಲಿಂಗೇಗೌಡರವರ ಮಗಳಾದ ಗಂಗಲಕ್ಷ್ಮಮ್ಮ ರವರ ಹೆಸರಿಗೆ ಕ್ರಯ ಮಾಡಿಕೊಟ್ಟಿದ್ದರು ಎಂದರೆ ಸರಿ. ಅದೇ ರೀತಿ ಸರ್ವೆ ನಂ.77/1 ರಲ್ಲಿ 1 ಎಕರೆ 6 ಗುಂಟೆ ಜಮೀನಿನ ಕ್ರಯಪತ್ರವನ್ನು ಲಿಂಗೇಗೌಡ ರವರು ಅವರ ಮಗಳಾದ ಗಂಗಲಕ್ಷ್ಮಮ್ಮ ರವರ ಹೆಸರಿಗೆ ಮಾಡಿದ್ದರು ಎಂದರೆ ಸರಿ. ಸರ್ವೆ ನಂ.84/1 ರಲ್ಲಿ 3 ಎಕರೆ 6 ಗುಂಟೆ ಜಮೀನನ್ನು ದಿನಾಂಕಃ 06.07.1976 ರಲ್ಲಿ ಲಿಂಗೇಗೌಡ ಮತ್ತು ಅವರ ಮಕ್ಕಳು ವಿಭಾಗ ಮಾಡಿಕೊಂಡರು ಎಂದರೆ ಲಿಂಗೇಗೌಡರವರ ಮರಣದ ನಂತರ ಅವರ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ. ಲಿಂಗೇಗೌಡರವರು ಮರಣ ಹೊಂದಿದ್ದರು ಎಂದು ತೋರಿಸಲು ಅವರ ಮರಣ ಪ್ರತ್ರವನ್ನು ನಾನು ಹಾಜರುಪಡಿಸಿಲ್ಲ. ಸದರಿ ವಿಭಾಗದ ಸಮಯದಲ್ಲಿ ಲಿಂಗೇಗೌಡರವರು ಬದುಕಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದ ಪತ್ರದಲ್ಲಿ ಲಿಂಗೇಗೌಡರವರ ಮರಣದ ದಿನಾಂಕವನ್ನು ನಮೂದು ಮಾಡಿಲ್ಲ.

ಲಿಂಗೇಗೌಡರವರ ಮೊದಲನೆಯ ಮಗನಾದ ವೀರಭದ್ರಯ್ಯ ನವರಿಗೆ ಸರ್ವೆ ನಂ.84/1 ರಲ್ಲಿ 1 ಎಕರೆ 10 ಗುಂಟೆ, ಸರ್ವೆ ನಂ.76/1 ರಲ್ಲಿ 1 ಎಕರೆ 12 ಗುಂಟೆ, ಸರ್ವೆ ನಂ.77 ರಲ್ಲಿ 1 ಎಕರೆ 3 ಗುಂಟೆ, ಸರ್ವೆ ನಂ.193/36 ರಲ್ಲಿ 28 ½ ಗುಂಟೆ, ಸರ್ವೆ ನಂ.69/1 ರಲ್ಲಿ 1 ಎಕರೆ 14 ಗುಂಟೆ ಬಂದಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ವೀರಭದ್ರದ್ಯನವರಿಗೆ ಸರ್ವೆ ನಂ.84/1 ರಲ್ಲಿ 2 ಎಕರೆ 16 ಗುಂಟೆ ಬಂದಿರುತ್ತದೆ. 1952 ರಲ್ಲಿ ಲಿಂಗೇಗೌಡರವರ 4 ಜನ ಮಕ್ಕಳಿಗೆ ಸರ್ವೆ ನಂ.84/1 ರಲ್ಲಿ ತಲಾ 1 ಎಕರೆ 10 ಗುಂಟೆ ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ರಾಮಲಿಂಗೇಗೌಡರವರಿಗೆ ಸರ್ವೆ ನಂ.84/1 ರಲ್ಲಿ 1 ಎಕರೆ 10 ಗುಂಟೆ ಮತ್ತು 15 ಗುಂಟೆ ಬಂದಿರುತ್ತದೆ. ಸರ್ವೆ ನಂ.84/1 ರಲ್ಲಿ ಒಟ್ಟು 10 ಎಕರೆ ಇರುತ್ತದೆ. ಅದರಲ್ಲಿ 5 ಎಕರೆ 37 ಗುಂಟೆ ಲಿಂಗೇಗೌಡರವರಿಗೆ ಬಂದಿತ್ತು ಎಂದರೆ ಕ್ರಯಕ್ಕೆ ಪಡೆದಿದ್ದರು. ಲಿಂಗೇಗೌಡರವರು ಕ್ರಯದ ಮೂಲಕ ಖರೀದಿ ಮಾಡಿದ್ದರು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ. ಎಲ್ಲರಿಗೂ ತಲಾ 1 ಎಕರೆ 10 ಗುಂಟೆ ಬಂದಿದ್ದು 1976 ಪಾಲು ಪಟ್ಟಿ ಆಧಾರದ ಮೇಲೆ ನನ್ನ ತಂದೆಗೆ 15 ಗುಂಟೆ ಬಂದಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 1958 ವಿಭಾಗದಲ್ಲಿ ನನ್ನ ತಂದೆಗೆ 1 ಎಕರೆ 10 ಗುಂಟೆ ಬಂದಿತ್ತು.

ಸರ್ವೆ ನಂ.76/1 ರಲ್ಲಿ 1 ಎಕರೆ, ಸರ್ವೆ ನಂ.193/36 ರಲ್ಲಿ 28½ ಗುಂಟೆ ಜಮೀನನ್ನು ವೀರಭದ್ರಯ್ಯ ನವರು ಮಾರಾಟ ಮಾಡಿದ್ದರು ಎಂದರೆ ಇರಬಹುದು. 3 ನೇ ಮಗ ಬೋಚೆಗೌಡರವರಿಗೆ ದಿನಾಂಕಃ 03.03.1983 ರಲ್ಲಿ ವಿಭಾಗದಲ್ಲಿ ದಾವಾ ಆಸ್ತಿ ಬಂದಿತ್ತು ಎಂದರೆ ಸರಿಯಲ್ಲ. 1983 ರಲ್ಲಿ ಬೋಚೆಗೌಡರವರಿಗೆ ಬಂದ ದಾವಾ ಆಸ್ತಿಯನ್ನು ಪ್ರಶ್ನಿಸಿರುತ್ತೇನೆ. ಸದರಿ ದಾಖಲೆಯನ್ನು ಸಿವಿಲ್ ?ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇವೆ. ವಿಭಾಗ ಆಗಿ ಸುಮಾರು 40 ವರ್ಷ ಆಗಿದೆ ಎಂದರೆ ಇರಬಹುದು. ಸುಮಾರು 40 ವರ್ಷ ಕಳೆದರು ಸಹ ದಾವೆಯ ವಾದಪತ್ರದಲ್ಲಿ ಪ್ರಶ್ನೆ ಮಾಡಿಲ್ಲ ಎಂದು ಕಾರಣಗಳನ್ನು ತಿಳಿಸಿರುತ್ತೇನೆ. ಅಂತಹ ಕಾರಣಗಳನ್ನು ವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. 1983 ರಲ್ಲಿ ಬೋಚೆಗೌಡರವರಿಗೆ ಆಸ್ತಿ ಹೋಗಿರುವ ಕಾರಣ ನಮಗೆ ದಾವೆ ಸಲ್ಲಿಸಲು ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಅಥವಾ ಸಹೋದರರು 1983

ನಂತರ ಅದನ್ನು ಪ್ರಶ್ನಿಸಿ ದಾವೆ ಸಲ್ಲಿಸಬಹುದಿತ್ತು ಎಂದರೆ ಶಂಕರಲಿಂಗೇಗೌಡರವರಿಗೆ ವಿಭಾಗದಲ್ಲಿ ಆಸ್ತಿಯು ಬಂದಿರಲಿಲ್ಲ.

(Further cross examination deferred at the request of counsel for the defendant No.6)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi